<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ 852/2023

ಡಿ ಡಬ್ಲ್ಯೂ- 01

ದಿನಾಂಕಃ **20-02-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

<u>ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಎ ಎಸ್ ವಕೀಲರಿಂದಃ</u>

1. ನನ್ನ ಮೇಲೆ ಸುಳ್ಳು ಆರೋಪಣೆ ಮಾಡಿದ್ದರಿಂದ ನನ್ನನ್ನು ಈ ನ್ಯಾಯಲಯ ಬಿಡುಗಡೆಗೊಳಿಸಬೇಕೆಂದು ಕೋರಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಶ್ರೀ ಬಿ .ಆರ್. ಎನ್ ವಕೀಲರಿಂದಃ</u>

1. ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ತನ್ನ ಸಹಿ ಗುರುತಿಸಿದ್ದು ಸದರಿ ದಾಖಲೆ ರಶೀದಿ/ಬಿಲ್ಲುಗಳಿಗೆ ಸಹಿ ಮಾಡಲು ಅಧಿಕಾರ ನೀಡುವ ಪತ್ರ ಆಗಿದ್ದು ಅದನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನಾನು ಶ್ರೀಕಾಂತ ಬಿಲ್ಲವರಿಗೆ ಜಾಮೀನು ಕೊಟ್ಟಿರುತ್ತೇನೆ. ಜಾಮೀನಿಗೋಸ್ಕರ ನಾನು ಕರಾರಿಗೆ ಸಹಿ ಮಾಡಿರುತ್ತೇನೆ. ಜಾಮೀನು ಕೊಡುವಾಗ ಜಾಮೀನಿನ ಭಾಧ್ಯತೆ ಏನು ಎಂದು ಗೊತ್ತಿರಲಿಲ್ಲ. ಜಾಮೀನಿನ ಭಾಧ್ಯತೆ ಏನು ಅಂತ ತಿಳಿದುಕೊಂಡು ಸಹಿ ಹಾಕಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಫ್ರೆಂಡ್ ಶಿಪ್ ನ ಆಧಾರದ ಮೇಲೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

2. ನನ್ನ ತಾಯಿಯ ಹೆಸರು ಶಂಬುದ್ದೀಸಾ. ಬಶೀರ್ ಹೌಸ್, ಜೆ.ಎಮ್ ರೋಡ್, ಗಂಗೊಳ್ಳಿ ನನ್ನ ವಾಸದ ಮನೆ ಇರುತ್ತದೆ. ನಿ.ಪಿ.5 ರಲ್ಲಿ ಅದೇ ವಿಳಾಸ ಇರುತ್ತದೆ ಎಂದರೆ ಸರಿ. ಆ ವಿಳಾಸಕ್ಕೆ ಪತ್ರಗಳು ಬಂದರೆ ನನಗೆ ಸಿಗುತ್ತದೆ ಎಂದರೆ ಸರಿ. ನಿ.ಪಿ.1(ಎ) ನನ್ನ ಸಹಿ ಇರುತ್ತದೆ. ನನ್ನೊಂದಿಗೆ ಶೋಭಾ,ಶ್ರೀಕಾಂತ ಬಿಲ್ಲವರವರು ಸಹಿ ಮಾಡಿರುತ್ತೇವೆ. ಶ್ರೀಕಾಂತ ಹಾಗೂ ಶೋಭಾರವರ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನೋಟಿಸು ಬಂದಿದ್ದನ್ನು ಸ್ವೀಕರಿಸಿ ನಾನು ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಆ ರೀತಿ ಉತ್ತರ ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈ ಪ್ರಕರಣ ದಾಖಲಿಸಿದ ನಂತರ ನನಗೆ ಸಮನ್ಸ್ ಬಂದಿದ್ದು ನಾನು ನ್ಯಾಯಲಯಕ್ಕೆ ಹಾಜರಾಗಿರುತ್ತೇನೆ ಎಂದರೆ ಸರಿ.

3. ನನ್ನ ಮೇಲೆ ಪ್ರಕರಣ ದಾಖಲಿಸಿದ ಪಶ್ಚಿಯನ್ ಮೀನುಗಾರರ ಸಂಘದ ವಿರುದ್ಧ ದೂರು

ಸಲ್ಲಿಸಿರುವುದಿಲ್ಲ. ನಾನು ಶ್ರೀಕಾಂತ ಬಿಲ್ಲವರವರಿಗೂ ನನ್ನ ಚೆಕ್ ನ್ನು ಜಾಮೀನಿಗಾಗಿ ಉಪಯೋಗಿಸಬಾರದು ಎಂದು ನೋಟಿಸು ಕೊಟ್ಟಿರುವುದಿಲ್ಲ. ನಾನು ಸಂಘದ ಮೇಲಾಧಿಕಾರಿಯವರಿಗೆ ನನ್ನ ಚೆಕ್ ನ್ನು ದುರುಪಯೋಗ ಪಡಿಸಿಕೊಳ್ಳಬಾರದು ಎಂದು ದೂರು ಕೊಟ್ಟಿರುವುದಿಲ್ಲ. ನಾನು ಅವರಿಗೆ ಚೆಕ್ ಕೊಟ್ಟಿದ್ದೇನೆ ಎಂದು ಒಂದು ವರ್ಷದ ಹಿಂದಿನಿಂದಲೂ ನನಗೆ ಗೊತ್ತಿತ್ತು. ಚೆಕ್ ನ್ನು ಕೊಟ್ಟ ಮೇಲೆ ಅದರ ಭಾಧ್ಯತೆ ಏನು ಎಂದು ಗೊತ್ತಿರುತ್ತದೆ.

4. ಜಾಮೀನು ಹಾಕುವಾಗ ನಾನು ಸಂಘದ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ. ಈವತ್ತಿನವರೆಗೂ ನನ್ನ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿದ ಬಗ್ಗೆ ಯಾವುದೇ ಕ್ರಮ ನಾನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ನಿ.ಪಿ.7 ರಲ್ಲಿ ನನ್ನ ಪರವಾಗಿ ಆಕ್ಷನ್ ನೀಡಲು ಎಲ್ಲರಿಗೂ ಸಹ ಅನುಮತಿ ನೀಡಲಾಗಿದೆ ಎಂಬುದಕ್ಕೆ ನಾನು ಸಹಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಾವು 3 ಜನರೂ ಮೀನಿನ ಖರೀದಿಗೆ ಸಾಲವನ್ನು ಪಡೆದುಕೊಂಡು ಈಗ ತನ್ನ ಬಾಧ್ಯಸ್ಥವನ್ನು ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚೆಕ್ ಗೆ ಸ್ಟಾಪ್ ಪೇಮೆಂಟ್ ಕೊಟ್ಟಿರುವುದಿಲ್ಲ. ಚೆಕ್ ನ ಭಾಧ್ಯತೆ ಬಗ್ಗೆ ತಿಳಿದುಕೊಂಡು ಚೆಕ್ ಕೊಟ್ಟಿದ್ದರೂ ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ**